ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ಈ ಪ್ರವಾಸಿಕೇಂದ್ರವನ್ನು ಅಭಿವೃದ್ಧಿಪಡಿಸಲು 1993-94 ನೇ ಸಾಲಿನಲ್ಲಿ ಹಣವನ್ನು ಒದಗಿಸಬೇಕು ಹಾಗೂ ಕೇಂದ್ರದಿಂದ ನೆರವು ಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಪ್ರವಾಸೋದ್ಯಮ ಸಚಿವರನ್ನು ವಿನಂತಿಸಿಕೊಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಮಾನ್ಯ ಮಾದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲುಕೋಟೆಯು ರಾಮಾನುಜಚಾರ್ಯರಿಂದ ಸ್ಥಾಪಿತವಾದ ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ಸೇರಿದ ತೀರ್ಥ ಯಾತ್ರಾಸ್ಥಳವಾಗಿದ್ದು ಶ್ರೀ ಚಲುವರಾಯಸ್ವಾಮಿ ದೇವಸ್ಥಾನದಿಂದ ಪ್ರಸಿದ್ಧ ಕಾರ್ಮಿಕ ಕ್ಷೇತ್ರವಾಗಿದೆ. ಇಲ್ಲಿಗೆ ತೀರ್ಥಯಾತ್ರಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಾಮಿಯವರ ವೈರಮುಡಿ ಉತ್ಸವ ಮತ್ತು ರಾಜಮುಡಿ ಉತ್ಸವದ ಸಮಯದಲ್ಲಿ ಬರುತ್ತಾರೆ. ಉಳಿದ ಕಾಲದಲ್ಲಿ ತೀರ್ಥಯಾತ್ರಿಕರ ಸಂಖ್ಯೆ ಕಡಿಮೆ ಇರುತ್ತದೆ. ಇವರುಗಳು ಬಿಡಾರಕ್ಕೆ ಸಾಮಾನ್ಯವಾಗಿ ಸಾಕಷ್ಟು ವ್ಯವಸ್ಥೆ ಇರುತ್ತದೆ. ಮೇಲಾಗಿ, ಈ ಸ್ಥಳವು ಮೈಸೂರಿನಿಂದ ಒಂದು ಗಂಟೆದಾರಿ ಇರುವುದರಿಂದ ತೀರ್ಥ ಯಾತ್ರರ್ಥಿಗಳು ಮೈಸೂರಿನಲ್ಲಿ ತಂಗುವುದಕ್ಕೆ ಇಚ್ಛೆ ಪಡುತ್ತಾರೆ. ಇದು ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಮತ್ತು ಪುರಾತತ್ವ ಅಭಿರುಚಿಯಿಂದ ಇದನ್ನು ಹಾಗೆಯೇ ಮುಂದುವರಿಸಿ ಅದರ ಪವಿತ್ರತೆಯನ್ನು ಕಾಪಾಡಿಕೊಂಡು ಬರುವುದು ಅತ್ಯವಶ್ಯಕ.

ಧಾರ್ಮಿಕ ಮತ್ತು ದತ್ತಿ ಹಾಗೂ ಪ್ರವಾಸೋದ್ಯಮ ಇಲಾಖೆಗಳು ಜಂಟಿಯಾಗಿ ಯಾತ್ರಾ ಸ್ಥಳಗಳಲ್ಲಿ ಛತ್ರಗಳನ್ನು ನಿರ್ಮಿಸುವ ಬಗ್ಗೆ 1993-94 ರ ಆಯವ್ಯಯದಲ್ಲಿ ಆರ್ಥಿಕ ಅವಕಾಶಗಳನ್ನು ಕಲ್ಪಿಸಲಾಗಿದೆ. ಮೇಲುಕೋಟೆಗೆ ಭೇಟಿ ನೀಡುವ ತೀರ್ಥಯಾತ್ರಿಗಳ ಬಗ್ಗೆ ಸರ್ವೇಕ್ಷಣ ನಡೆಸಿ, ಅವಶ್ಯ ಕಂಡುಬಂದಲ್ಲಿ ಈ ಯೋಜನೆಯನ್ನು ಎರಡು ಇಲಾಖೆಗಳು ಜಂಟಿಯಾಗಿ ಅನುಷ್ಠಾನಗೊಳಿಸಲು ಪರ್ಯಾಲೋಚಿಸಲಾಗುವುದು.

ಹಾಗೂ ಮೇಲುಕೊಟೆಯಲ್ಲಿ ಪ್ರವಾಸಿ ಬಂಗಲೆ ನಿರ್ಮಿಸಲು 29.96 ಲಕ್ಷ ರೂ. ಗಳ ಅಂದಾಜು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಕೇಂದ್ರ ಸರ್ಕಾರವು 18.00 ಲಕ್ಷ ರೂ. ಗಳನ್ನು ಮಂಜೂರು ಮಾಡಿ 1.00 ಲಕ್ಷ ರೂ. ಗಳನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಿದೆ. ಪ್ರವಾಸೋದ್ಯಮ ಇಲಾಖೆಯು ಜಮೀನನ್ನು ಪಡೆದುಕೊಂಡಿದೆ.

ಪ್ರತಿ ವರ್ಷ ನಡೆಯುವ ವೈರಮುಡಿ ಉತ್ಸವದ ಸಂದರ್ಭದಲ್ಲಿ ಕೆ.ಎಸ್.ಟಿ.ಡಿ.ಸಿ. ಯು ವಿಶೇಷ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುತ್ತಿದೆ.

ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಮೇಲುಕೋಟೆಯನ್ನು (ಸಿ) ಗುಂಪಿನಡಿಯಲ್ಲಿ ಸೇರಿಸಿದ್ದು, ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆ ಮೇಲೆ ಶೇಕಡ 25 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುವುದು.

** 7. ಬೆಳಗಾವಿ ಜಿಲ್ಲಾ ಕೇಂದ್ರದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಮೆಕ್ಯಾನಿಕಲ್ ಡಿವಿಜನ್ ಹಾಗೂ ಬೈಲಹೊಂಗಲ ಡಿಪೋದಲ್ಲಿ ಅವ್ಯವಸ್ಥೆಯ ಬಗ್ಗೆ :

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ಡಿಪೋದಿಂದ ಕೆ.ಎಸ್.ಆರ್.ಟಿ.ಸಿ. ಯವರು ಬೆಂಗಳೂರು ಬೈಲಹೊಂಗಲ ಸೂಪರ್ ಡಿಲೆಕ್ಸ್ ಬಸ್ಸನ್ನು ಓಡಾಡಿಸುತ್ತಾ ಇರುವರು. ಆದರೆ, ಒಂದು ಬಸ್ಸು (ಸೂಪರ್ ಡಿಲೆಕ್ಸ್) ಕೆಟ್ಟು 15 ದಿನಗಳಾದವು. ಆ ಬಸ್ಸನ್ನು ದುರಸ್ತಿಗಾಗಿ ಬೆಳಗಾಂ ಮೆಕ್ಯಾನಿಕಲ್ ಸಬ್ ಡಿವಿಜನ್, ಕೆ.ಎಸ್.ಆರ್.ಟಿ.ಸಿ. ಬೆಳಗಾಂ ಇವರಿಗೂ ಕಳುಹಿಸಿದರೂ ಇನ್ನೂವರೆವಿಗೂ ಮಾಡಿರುವುದಿಲ್ಲ. ಇದು ಅಲ್ಲದೆ, ಕೂಡಲೇ ದುರಸ್ತಿ ಮಾಡಿಸಲು ವಿನಂತಿಸಿಕೊಂಡಿದ್ದರೂ ಸಹಾ ಯಾವುದೇ ದೂರು ಮಾಡುತ್ತಾ ಇರುವುದಿಲ್ಲ. ಅದು ಅಲ್ಲದೇ ಆ ಗಾಡಿ

ದುರಸ್ತಿಯಾಗುವರೆಗೆ ಬೆಳಗಾಂದಿಂದ ಒಂದು ಸ್ಪೇರ್ ಗಾಡಿಯನ್ನು ಸಹಾ ಬೈಲಹೊಂಗಲಕ್ಕೆ ಕಳುಹಿಸಿರುವುದಿಲ್ಲ. ಹೀಗಾಗಿ, ಬೈಲಹೊಂಗಲದಿಂದ ಬೆಂಗಳೂರಿಗೆ ಆರ್ಡಿನರಿ ಕೆಂಪುಗಾಡಿ ಓಡಾಡಿಸಲಿಕ್ಕೆ ಹತ್ತಿರುತ್ತಾರೆ. ಆದ ಕಾರಣ, ಕೂಡಲೇ ಸೂಪರ್ ಡಿಲಕ್ಸ್ ಗಾಡಿ ದುರಸ್ತಿ ಮಾಡುವುದಾಗಬೇಕು ಮತ್ತು ಅಲ್ಲಿವರೆಗೆ ಬೆಳಗಾಂದಿಂದ ಒಂದು ಗಾಡಿಯನ್ನು ಬೈಲಹೊಂಗಲಕ್ಕೆ ಕಳುಹಿಸುವುದಾಗಬೇಕು.

ಎರಡನೇಯದಾಗಿ ಬೈಲಹೊಂಗಲ ಡಿಪೋದಲ್ಲಿ 18 ಗಾಡಿಗಳನ್ನು ಸುಮಾರು 7 ಲಕ್ಷ ಕಿ.ಮೀ. ಓಡಿದ ಗಾಡಿಗಳನ್ನು ಓಡಾಡಿಸಲಿಕ್ಕೆ ಹತ್ತಿರುತ್ತಾರೆ. ಈ ಗಾಡಿಗಳು ಸ್ಕ್ರ್ಯಾಪ್ ಆಗಿದ್ದು ಇರುತ್ತವೆ. ಇವು, ರಸ್ತೆಯ ಮೇಲೆ ಕೆಟ್ಟು ನಿಲ್ಲುತ್ತಿದ್ದು ಪ್ರವಾಸಿಗರಿಗೆ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಇದು ಅಲ್ಲದೆ, ಮೊನ್ನೆ ಕೊಟ್ಟ ಹೊಸ ಬಸ್ಸುಗಳು ನಿಲ್ಲುತ್ತಿದ್ದು, ಪ್ರವಾಸಿಕರಿಗೆ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಇದು ಅಲ್ಲದೆ, ಮೊನ್ನೆ ಕೊಟ್ಟ ಹೊಸ ಬಸ್ಸುಗಳನ್ನು ಸಹಾ, ಬೇರೆ ಕಡೆಗೆ ಜಾತ್ರೆಯ ಸಲುವಾಗಿ ತೆಗೆದುಕೊಂಡು ಹೋಗಿರುತ್ತಾರೆ. ಪ್ರಯಾಣಿಕರು ಹಣಕೊಟ್ಟು ತಾವು ಹೋಗಬೇಕಾದ ಊರಿಗೆ ಹೋಗುವ ಸ್ಥಿತಿಯಲ್ಲಿರುವುದಿಲ್ಲ.

ಇದು ಅಲ್ಲದೆ, ಬೈಲಹೊಂಗಲ ಕೆ.ಎಸ್.ಆರ್.ಟಿ.ಸಿ. ಡಿಪೋದ ಅವವಸ್ಥೆಯನ್ನು ಹೇಳಲಿಕ್ಕೆ ಬರಲಾರದು. ಅಲ್ಲಿ ಒಬ್ಬ ದಕ್ಷ ಡಿಪೋ ಮ್ಯಾನೇಜರನ್ನು ಸಹಾ ಪೋಸ್ಟೀಂಗ್ ಮಾಡಲು ತಯಾರು ಇರುವುದಿಲ್ಲ. ಸಸ್‌ಪೆಂಡ್ ಆಗುತ್ತಿರುವಂಥ ಡಿಪೋ ಮ್ಯಾನೇಜರನನ್ನು ಹಾಕಿ ಡಿಪೋದ ಎಲ್ಲಾ ವ್ಯವಸ್ಥೆಯನ್ನು ಹಾಳು ಮಾಡಿರುತ್ತಾರೆ.

ಕೂಡಲೇ ಬೈಲಹೊಂಗಲ ಡಿಪೋ ಸುಧಾರಿಸದೇ ಇದ್ದಲ್ಲಿ ಶಾಂತಭಂಗವಾಗುವ ಸಂಭವವಿದೆ. ಮತ್ತು ಬೆಳಗಾಂ ಮೆಕ್ಯಾನಿಕಲ್ ಡಿವಿಜನ್ ಸಹಾ ಉತ್ತಮಗೊಳಿಸುವುದು ಅತಿ ಆವಶ್ಯವಿದೆ. ಇಲ್ಲಿ ಕೆಲಸ ಮಾಡದೇ ಕುಳಿತು ಪಗಾರವನ್ನು ನೌಕರರು ತೆಗೆದುಕೊಳ್ಳುತ್ತಿರುತ್ತಾರೆ. ಸಾರಿಗೆ ಸಚಿವರ ಗಮನವನ್ನು ಈ ಮೂಲಕ ಸೆಳೆಯುತ್ತೇನೆ.

* * ಶ್ರೀ ಭೀಮಣ್ಣ ಖಂಡ್ರಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, 1991 ನೇ ಡಿಸೆಂಬರ್ ಮಾಹೆಯಲ್ಲಿ ಬೆಂಗಳೂರು ಮತ್ತು ಬೈಲಹೊಂಗಲದ ನಡುವೆ ಸುಖಾಸೀನ ಸಾರಿಗೆಯನ್ನು ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಸದರೀ ಸಾರಿಗೆಯನ್ನು ಬೆಂಗಳೂರು ಘಟಕದಿಂದ ಓಡಿಸಲಾಯಿತು. ಆದರೆ, ಈ ಸಾರಿಗೆಯನ್ನು ಬೈಲಹೊಂಗಲ ಘಟಕದಿಂದಲೇ ಓಡಿಸಬೇಕೆಂದು ಒತ್ತಾಯ ಪಡಿಸಲಾಯಿತು. ಬೈಲಹೊಂಗಲ ಘಟಕ ಬೆಳಗಾವಿ ವಿಭಾಗಕ್ಕೆ ಸೇರಿದ್ದು ಆ ವಿಭಾಗ ಕೇವಲ ಟಾಟಾ ಬಸ್ಸುಗಳನ್ನು ಮಾತ್ರ ಹೊಂದಿದ್ದರಿಂದಲೂ ಮತ್ತು ಆ ಸಮಯದಲ್ಲಿ ಟಾಟಾ ಸುಖಾಸೀನ ಬಸ್ಸುಗಳ ಲಭ್ಯವಿಲ್ಲದಿದ್ದರಿಂದ ಸದರೀ ಮಾರ್ಗವನ್ನು ಬೈಲಹೊಂಗಲ ಘಟಕಕ್ಕೆ ವರ್ಗಾಯಿಸಿದರೆ ಸುಗಮ ಕಾರ್ಯಾಚರಣೆಗೆ ಅನಾನುಕೂಲವಾಗುವುದೆಂದು ವಿನಂತಿಸಿಕೊಳ್ಳಲಾಯಿತು. ಆದುದರಿಂದ ದಿನಾಂಕ 14-2-92 ರಿಂದ ಈ ಸಾರಿಗೆಯನ್ನು ಬೈಲಹೊಂಗಲ ಘಟಕಕ್ಕೆ ವರ್ಗಾಯಿಸಲಾಯಿತು. ಟಾಟಾ ಸುಖಾಸೀನ ಬಸ್ಸುಗಳು ಇರಲಿಲ್ಲವಾದ್ದರಿಂದ ಹೊಸ ಎರಡು ಲೈಲ್ಯಾಂಡ್ ಬಸ್ಸುಗಳನ್ನು (ಕೆ. ಎ.22 ಎಫ್ 199 ಮತ್ತು ಕೆ.ಎ. 22 ಎಫ್ 299) ದಿನಾಂಕ 14-2-92 ರಂದು ಬೈಲಹೊಂಗಲ ಮತ್ತು ಬೆಂಗಳೂರು ನಡುವೆ ಸಂಚಾರಕ್ಕಾಗಿ ಒದಗಿಸಲಾಯಿತು.

ಹಾಲಿ ಬೈಲಹೊಂಗಲ ಘಟಕದಿಂದ ಕೇವಲ ಎರಡೇ ಸುಖಾಸೀನ ಅನುಸೂಚಿಗಳನ್ನು ಓಡಿಸಲಾಗುತ್ತಿದೆ. ಈ ಎರಡು ಬಸ್ಸುಗಳಿಗಾಗಿ ಮತ್ತೊಂದು ಸುಖಾಸೀನ ಬಸ್ಸನ್ನು ಮೀಸಲಾಗಿಡುವುದು ಆರ್ಥಿಕ ದೃಷ್ಟಿಯಿಂದ ಸಮಂಜಸವಲ್ಲ. ಒಂದು ಸುಖಾಸೀನ ಬಸ್ಸಿನ ಬೆಲೆ ಸುಮಾರು 7 ಲಕ್ಷ ರೂ. ಗಳು.

ಮೇಲೆ ತಿಳಿಸಿರುವ ಎರಡು ಬಸ್ಸುಗಳಲ್ಲಿ ಒಂದು ಅಂದರೆ ಕೆಎ 22 ಎಫ್ 220 ರ ಇಂಜಿನ್‌ನಲ್ಲಿ ದಿನಾಂಕ 22-2-93 ರಂದು ದೋಷ ಕಂಡುಬಂದಿತು. ಬೆಳಗಾವಿ ವಿಭಾಗೀಯ ವಾಹನ ದುರಸ್ತಿ ಕಾರ್ಯಾಗಾರ ಟಾಟಾ ಬಸ್ಸುಗಳ ರಿಪೇರಿಗೆ ಸಜ್ಜುಗೊಳಿಸಿರುವುದರಿಂದ ಸದರೀ

ಬಸ್ಸನ್ನು (ಲೈಲ್ಯಾಂಡ್) ದುರಸ್ತಿ ಮಾಡಲಾಗಿಲ್ಲ. ಇಂಜಿನ್‌ನ ವಿವರವಾದ ಪರಿಶೀಲನೆಯ ನಂತರ ಅದನ್ನು ಬದಲಾಯಿಸಬೇಕೆಂದು ನಿರ್ಧರಿಸಲಾಯಿತು. ಸದರೀ ಬಸ್ಸಿಗೆ (ಹಿನೋ) ಇಂಜಿನ ಅಳವಡಿಸಿರುವುದರಿಂದ ಅದನ್ನು ಬದಲಾಯಿಸಲು ಬೆಂಗಳೂರಿಗೆ ತರಬೇಕಾಯಿತು. ದಿನಾಂಕ 2-3-93 ರಂದು ಆ ಬಸ್ಸನ್ನು ಬೆಂಗಳೂರಿಗೆ ತರಲಾಯಿತು. ಪ್ರಾದೇಶಿಕ ಕಾರ್ಯಾಗಾರದಲ್ಲಿ ಇಂಜಿನನ್ನು ದಿನಾಂಕ 3-3-93 ರಂದು ಬದಲಾಯಿಸಿ ಬಸ್ಸನ್ನು ದಿನಾಂಕ 5-3-93 ರಿಂದ ಸಂಚಾರಕ್ಕೆ ಬಿಡಲಾಯಿತು.

ಬೆಳಗಾವಿ ವಿಭಾಗದಲ್ಲಿ ಒಟ್ಟು 10 ಸುಖಾಸೀನ ಅನುಸೂಚಿಗಳಿದ್ದು ಅವುಗಳ ಸಂಚಾರಕ್ಕಾಗಿ 10 ಸುಖಾಸೀನ ಬಸ್ಸುಗಳು ಮಾತ್ರ ಇರುವುದರಿಂದ ಕೆಟ್ಟಿರುವ ಬಸ್ಸಿಗೆ ಬದಲಿ ಸುಖಾಸೀನ ಬಸ್ಸನ್ನು ಬೆಳಗಾವಿನಿಂದ ಕೊಡಲು ಸಾಧ್ಯವಾಗಿಲ್ಲ.

ಹಾಲೀ ಬೈಲಹೊಂಗಲ ಘಟಕ 90 ಅನುಸೂಚಿಗಳನ್ನು ಓಡಿಸಲು 96 ಬಸ್ಸುಗಳನ್ನು ಹೊಂದಿದೆ. ಅವುಗಳಲ್ಲಿ 20 ಬಸ್ಸುಗಳು ಈಗಾಗಲೇ 7 ಲಕ್ಷ ಕಿ.ಮೀ ದೂರವನ್ನು ಕ್ರಮಿಸಿರುವುದರಿಂದ ಅವುಗಳ ಕವಚ ಮತ್ತು ಯಾಂತ್ರಿಕ ಪರಿಸ್ಥಿತಿಯನ್ನು ಪರೀಕ್ಷಿಸಿ ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಪ್ರಸ್ತುತ ಆರ್ಥಿಕ ವರ್ಷಗಳಲ್ಲಿ ಅಂದರೆ 1992-93 ರಲ್ಲಿ (ಫೆಬ್ರವರಿ ವರೆಗೆ) 25 ಹೊಸ ಬಸ್ಸುಗಳನ್ನು ಬೈಲಹೊಂಗಲ ಘಟಕಕ್ಕೆ ಒದಗಿಸಲಾಗಿದೆ. ಕಳೆದ 6 ತಿಂಗಳುಗಳಲ್ಲಿ ಸದರೀ ಘಟಕಕ್ಕೆ ಸೇರಿದ ಬಸ್ಸುಗಳು ಪ್ರತಿ ತಿಂಗಳು ಮಾರ್ಗದ ಮದ್ಯೆ ಕೆಟ್ಟು ನಿಂತ ಪ್ರಕರಣಗಳ ಸರಾಸರಿ ಸಂಖ್ಯೆ 25. ವಾಹನಗಳ ದುರಸ್ತಿಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗುವುದು. ಘಟಕ ವ್ಯವಸ್ಥಾಪಕರ ಕಾರ್ಯದಕ್ಷತೆಯನ್ನು ಸುದಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

8. ಮಲಪ್ರಭ ಎರಡನೆಯ ಹಂತದ ಯೋಜನೆಯಿಂದ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರು ಸರಬರಾಜು.

ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಮೂರು ಕಡೆಯಿಂದ ಅಂದರೆ 1) ನೀರಸಾಗರ ದುಮ್ಮವಾಸ ಕೆರೆ . 2) ಉಣಕಲ್ಲ ಕೆರೆ ಹಾಗೂ 3) ಮಲಪ್ರಭಾ ನದಿಯಿಂದ ಜಲ ಮಂಡಳಿಯವರು ತಂದ ನೀರನ್ನು ಮಹಾನಗರ ಸಭೆಯವರು ಎರಡು ದಿವಸಕ್ಕೆ ಒಂದಾವರ್ತಿ ಸಾರ್ವಜನಿಕರಿಗೆ ಸರಬರಾಜು ಮಾಡಲಾಗುತ್ತಿದೆ. ಮಲಪ್ರಭಾ ಎರಡನೆಯ ಹಂತದ ಕಾರ್ಯವನ್ನು 1990 ರಲ್ಲಿ ಪ್ರಾರಂಭಿಸಿ, 1991 ರಲ್ಲಿ ಪೂರ್ಣಗೊಳಿಸಿ, ಅವಳಿ ನಗರಗಳಿಗೆ ಪ್ರತಿ ದಿವಸ ನೀರು ಸರಬರಾಜು ಮಾಡಲಾಗುವುದೆಂದು ಸರಕಾರ ಹಾಗೂ ಜಲ ಮಂಡಳಿ ವತಿಯಿಂದ ಮಹಾನಗರದ ಜನತೆಗೆ ಆಶ್ವಾಸನೆ ನೀಡಲಾಗಿತ್ತು. ಆದರೆ ಈ ವರೆಗೂ ಮಲಪ್ರಭಾ ಎರಡನೆ ಹಂತದ ಯೋಜನೆಯನ್ನು ಪೂರ್ಣಗೊಳಿಸಲಾಗಿಲ್ಲ. ಇದರಿಂದ ಮಹಾನಗರದ ಜನತೆಗೆ ನೀರಿನ ಅಭಾವವಾಗಿ ತುಂಬಾ ತೊಂದರೆಯಾಗುತ್ತಾ ಇದೆ. ಕಾರಣ ಸದರಿ ಯೋಜನೆಯನ್ನು ಪೂರ್ಣಗೊಳಿಸುವ ನಿಗದಿತ ಸಮಯವನ್ನು ತಿಳಿಯಲು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಅಲ್ಲದೇ ಸಾರ್ವಜನಿಕರಿಗೆ ನೀರು ಪೂರೈಸುವ ಈಗಿನ ವ್ಯವಸ್ಥೆಯನ್ನು ಮಹಾನಗರ ಸಭೆಯಿಂದ ಜಲ ಮಂಡಳಿಯವರಿಗೆ ಹಸ್ತಾಂತರಗೊಳಿಸುವ ಪ್ರಯತ್ನ ಇದೆ ಎಂದು ನನಗೆ ತಿಳಿದು ಬಂದಿದೆ. ಇದು ನಿಜವೆ? ಇದು ನಿಜವಾಗಿದ್ದರೆ ಹಾಗೆ ಮಾಡಬಾರದೆಂದು ತಮ್ಮ ಮುಖಾಂತರ ಸರಕಾರಕ್ಕೆ ಒತ್ತಾಯಿಸುತ್ತೇನೆ.

ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮುಖ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಮೂರು ಜಲ ಮೂಲಗಳಿಂದ ಅಂದರೆ